ರಿಜಿಸ್ಟ್ರೇಷನ್ ನಂಬರ್.	ದಸ್ತೈವಜು ಬರದು ಕೊಟ್ಟುವನ ಹೆಸರು.	ದಸ್ತೈವಜು ಬರಸಿ ಕೊಂಡವನ ಹೆಸರು.	ದಸ್ತೈವಜು ಬರೆದ ತಾರೀಖು.	ರಿಜಿಸ್ಟ್ರೇಷನ್ ಮಾಡಬೇಕಾದ ತಾರೀಖು.	ರಿಜಿಸ್ಟ್ರೇಷನ್ ಆಫೀಸಿಗೆ ಬಂದ ತಾರೀಖು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
1884-85ನೇ ಇಸವಿ 2ನೇ ನಂಬರ್ ಬುಕ್ಕಿನ ಬಾಬತು	ಹೊಸಕೆರೆ ಮಾಗಣಿ ಬಂಡಿಗಡಿ ಗ್ರಾಮದ ವಾಚಾರ ಜಾತಿ ವ್ಯಾಸ್ಥನಾದ ಪಾರ ಕಸಬಿನ ಶಿದ್ದಮ್ಮನ ಲ್ಲಪ್ಪಕೆಟ್ಟು ಹೆಂಡತಿ ನ್ನಮ್ಮ 1, ಮಳಿಗೆ ಸುಬ್ಬಣ್ಣಕೆಟ್ಟು ಮಗ ಶಿದ್ದಪ್ಪ 1	ಬಂಡಿಗಡಿ ಗ್ರಾಮದ ಮುನಿಯೂರು ವಾಸ್ತವ್ಯ ಸಾಹುಕಾರಿ ಕವಿ ಸಬಿನ ಸುಬ್ಬರಾಯರ ಹೊಸ ಮಗ ಕೃಷ್ಣಪ್ಪನವರು	26ನೇ ಮೇ 1884ನೇ ಇಸವಿ	16ನೇ ಸೆಪ್ಟೆಂಬರ್ 1884ನೇ ಇಸವಿ	ರಿಜಿಸ್ಟ್ರೇಷನ್ ತಿರಸ್ಕರಿಸಲ್ಪಟ್ಟದ್ದು 28ನೇ ಜನೇವರಿ 1885ನೇ ಇಸವಿ	ನಿಮಗೆ ಸಲ್ಲತ್ಕ್ಕಾದ 350 ರೂಪಾಯಿಗಳಿಗೆ ಖಾತೆ ಮುಂಗಾರದ ಬಾಬತು ನಗಗಳು 3, ಬೆಳ್ಳೀ ಬಾಬತು ನಗಗಳು 2, ಜಾನುವರ್‌ಗಳು 2, ಈರೀತಿ ತೋರಿಸಿ ಕೊಡುವ ಮಾಡಿರುತದೆಯಂತ.
1885-86ನೆ ಇಸವಿ ನಂಬರ್ 55ನೇ 1ನೇಬು ಕಿನ ಬಾಬತು.	ಮುರುವ್ಯೆ ಮಾಗಣಿ ಹುಲಗರಡ್ಡಿ ಗ್ರಾಮದ ವಾಸ್ತವ್ಯ ಸುಬ್ಬರಾಯರ ಮಗ ಕೇಷಯ್ಯ	ಮೇಗುಂದ ಮಾಗಣಿ ಭೈರದೇವರ ಗ್ರಾಮದ ಮರಿಯಪ್ಪನವರ ಮಗ ನಾರಣಪ್ಪ ಹೆಬ್ಬಾರು	7ನೇ ಮೇ 1885ನೇ ಇಸವಿ	29ನೇ ಮೇ 1885ನೇ ಇಸವಿ	ರಿಜಿಸ್ಟ್ರಾದ್ದು 29ನೇ ಮೇ 1885ನೇ ಇಸವಿ	140 ರೂಪಾಯಿನ ತರೀ ಬಾಗಾಯತು ಜಮೀನಿನ ಕ್ರಯಪತ್ರ.

ಜೆ. ಯಿ. ಕ್ಯಾಂಬೆಲ್,
ರಿಜಿಸ್ಟ್ರಾರ್.

ನೋಟೀಸ್.

ಹಾರಟಿಕಲ್ಚರಲ್ ಶೋ ಯಾನೆ ಫಲಪುಷ್ಪ ತೋರಿಸುವ ವಿನೋದವು, 1887ನೇ ಇಸವಿ ಆಗಸ್ಟು 3ನೇ ಮತ್ತು ೪ ಬುಧವಾರ ಮಧ್ಯಾನ್ಹಾತ್ಪರ 3½ ಘಂಟೆಗೆ ಲಾಲ್‌ಬಾಗಿನಲ್ಲಿ ನಡಿಯುತ್ತೆ.

ಒಳಗೆ ಹೋಗುವ ಬಗ್ಯಾಗಿ ಇದರಡೀಕಂಡ ದರಗಳು ವಸೂಲ್ ಮಾಡಲ್ಪಡುವವು :—

ದೊಡ್ಡವರಿಗೆ ... ಫೀ ಇಸಂ ವಂದುರೂಪಾಯಿ.
ಮಕ್ಕಳಿಗೆ ... ಡಿಟ್ಟೋ ಯಂಟುಆಣೆ.
ದಿರಸ್‌ಮೇಲೆ ಇರತಕ್ಕ ಸೋಲ್ಜರುಗಳಿಗೆ ... ಡಿಟ್ಟೋ ನಾಲ್ಕಾಣೆ.

ತಾರೀಖು 4ನೇ ಗುರುವಾರ ದಿವಸವೆಲ್ಲಾ ಸರ್ವರೂ ಫೀ ಇಸಂ ಯರಡಾಣೆ ಪ್ರಕಾರ ಪಾವತಿ ಮಾಡಿ ಒಳಗೆ ಹೋಗಬಹುದು.

ಲಾಲ್‌ಬಾಗ್ ತೋಟಕ್ಕೆ ಸದರೀ ದಿವಸಗಳಲ್ಲಿ, ವಿನೋದಕೆಲಸಕ್ಕಾಗಿ ಸಂಬಂಧಪಟ್ಟ ಜನಗಳು ಏನಾ, ಅನ್ಯಥಾ ಯಾರಿಗೂ ಅವಕಾಶ ಕೊಡಲ್ಪಡಲಾರದು.

ಜೆ. ಕ್ಯಾಮರ್ಕ್,
ಸೂಪರಿಂಟೆಂಡೆಂಟ್, ಗ|| ಗಾರ್ಡನ್ಸ್.

ಗೈರವಿಲಾ ಆದ

ಪೂರಾ ನೋಟಿನ.—

ನಂಬರ್ B 96—01224 | ಸರ್ಕಲ್. ಮದರಾಸ್ | ಕ್ರಯ. ರೂ. 10 | ಹಕ್ಕುದಾರ್—ಶಿವಮೊಗ್ಗಾ ಡಿಸ್ಟ್ರಿಕ್ಟು ಕಿರಾಳ ಕೊಪ್ಪವಲ್ಲಿರುವ ವೇಸ್ಟ್ರ ಬಿ. ವೆಂಕಟರಾವ್.

Mysore Government Press, Bangalore.—1887.

ಮೈಸೂರ ಗಿಜಿಟ್ಟು.

ಸರ್ಕಾರದಿಂದ ಫಾಯಿಷ್ ಆದ್ದು.

ನಂ. 31 ಸ್ ೧೮೮೭.

ಬೆಂಗಳೂರು, ಶನಿವಾರ, ಆಗಸ್ಟ್ ತಾ|| 6, ಸ್ ೧೮೮೭.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ನಂಬ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್‌ಕ್ಸ್ ಆಫೀಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೆ ಬಕ್‌ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯೂಟಿ ಕಮ್ಮಿಷನರುಗಳು, ಸಬ್‌ಆರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟಆಕ್ಟುಗಳು ವರೆಗ್ಯುಲೇರ್ಷಗಳು, ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 12ನೇ ಜುಲೈ 1887.

ನಂ. 55.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮಗಳು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮಗಳು ಚಡದರಖಾಸ್ತುದಾರನಿಗೆ ಹರಾಜ್ ನಿಲ್ಲುವದು.

2. ಪರಂತು, ಬಂದು ಗ್ರಾಮವನು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಡಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.